# ಕೆರೆ ಸಮ್ಮೇಳನದ ನಿರ್ಣಯಗಳು

ಶಿರಸಿ: ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ, ಸ್ವರ್ಣವಲ್ಲೀ ಮಹಾಸಂಸ್ಥಾನ, ಶಾರದಾಂಬಾ ಶಿಕ್ಷಣ ಸಂಸ್ಥೆ, ಶಿಗೇಹಳ್ಳಿ ಗ್ರಾಮ ಅರಣ್ಯ ಸಮಿತಿ ಇವುಗಳ ಆಶ್ರಯದಲ್ಲಿ ನಡೆದ

**ಕೆರೆ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ಈ ಕೆಳಗಿನಂತಿವೆ.**

**1.** ಪಶ್ಚಿಮಘಟ್ಟದ ಜಲಮೂಲಗಳು ಕೆರೆಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು ಎಂದು ಕೆರೆ ಸಮ್ಮೇಳನ – 2014 ಸರ್ಕಾರವನ್ನು ಒತ್ತಾಯ ಮಾಡಿದೆ.

**2.** ಶಾಲಾ ಹೈಸ್ಕೂಲು, ಕಾಲೇಜುಗಳ ಪಠ್ಯೇತರ ಚಟುವಟಿಕೆಗಳ ಭಾಗವಾಗಿ ವಿದ್ಯಾರ್ಥಿಗಳಿಗೆ ಕೆರೆಗಳ ಸಮೀಕ್ಷೆ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಬೇಕು.

**3.** ಪಶ್ಚಿಮಘಟ್ಟಗಳ ಕೆರೆಗಳ ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆಗೆ ಹಾಗೂ ವನೀಕರಣಕ್ಕೆ ವಿಶೇಷ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು.

**4.** ಭಾರತ ಸರ್ಕಾರದ ಸ್ವಚ್ಛತಾ ಅಭಿಯಾನದ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಆಗಬೇಕು. ಸ್ಥಾನಿಕ ಸಂಘ–ಸಂಸ್ಥೆಗಳು ಕೆರೆ ಸ್ವಚ್ಛತಾ ಅಭಿಯಾನ, ಕೆರೆ ಉತ್ಸವ, ಕೆರೆ ಹಬ್ಬ ಮುಂತಾದ ವ್ಯಾಪಕ ರಚನಾತ್ಮಕ ಜನಾಂದೋಲನಗಳನ್ನು ಕೈಗೊಳ್ಳಬೇಕು.

**5.** ಕೆರೆಗಳ ಅತಿಕ್ರಮಣ ತಡೆಗೆ ಕಠಿಣ ಕ್ರಮ ಅತ್ಯವಶ್ಯ. ಸ್ಥಾಪಿತ ಹಿತಾಸಕ್ತಿಗಳಿಂದ ಆಗಿರುವ ಕೆರೆ ಅತಿಕ್ರಮಣ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಆಗಬೇಕು.

**6.** ಮಲೆನಾಡಿನ ಕೆರೆಗಳಲ್ಲಿ ಬಹಳಷ್ಟು ಹೂಳು ತುಂಬಿದೆ. ಕೆರೆ ಹೂಳು ತೆಗೆಯಲು ಸ್ಥಾನೀಯ ಪ್ರಯತ್ನಗಳು ಹೆಚ್ಚಾಗಬೇಕು.

**7.** ದೇವಸ್ಥಾನ ಪುಷ್ಕರಣಿ, ಪುಣ್ಯ ತೀರ್ಥಗಳ ಉತ್ತಮ ನಿರ್ವಹಣೆಗೆ, ರಕ್ಷಣೆಗೆ ದೇವಾಲಯ ಆಡಳಿತ ಮಂಡಳಿಗಳು ಮುಂದಾಗಬೇಕು.

**8.** ಕಪ್ಪತಗುಡ್ಡ ಹೊಗ್ರೆಕಾನಗಿರಿ, ಕೊಡಚಾದ್ರಿಗಳಂಥ ಅಕ್ಷಯ ಜಲಪಾತ್ರೆಗಳನ್ನು ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ಸರ್ಕಾರ ಅವಕಾಶ ನೀಡಬಾರದು.

**9.** ರಾಜ್ಯದಲ್ಲಿರುವ ಗ್ರಾಮ ಮಟ್ಟದ ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಸಕ್ರಿಯಗೊಳಿಸಬೇಕು. ಬಲಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು.

**10.** ದೇವರಕಾಡು, ರಾಮಪತ್ರೆಜಡ್ಡಿಗಳಂಥಹ ಜೌಗು ಭೂಮಿಗಳನ್ನು ಸೂಕ್ಷ್ಮ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು.

**11.** ಮಲೆನಾಡಿನ ಕೆರೆಗಳ ವ್ಯಾಪ್ತಿ 5 ಎಕರೆಗಿಂತ ಕಡಿಮೆ ಇರುತ್ತದೆ. ಕಿರು ನೀರಾವರಿ ಇಲಾಖೆಯ ನಿಯಮಗಳ ಪ್ರಕಾರ ಕೆರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಲೆನಾಡಿನಲ್ಲಿ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಕೆರೆ ವ್ಯಾಪ್ತಿ ಮಿತಿಯನ್ನು ಸಡಿಲಗೊಳಿಸಿ ಮಲೆನಾಡಿನ ಅತಿಚಿಕ್ಕ ಕೆರೆಗಳನ್ನು ಸಂರಕ್ಷಣೆ ಮಾಡಲು ಕ್ರಮ ಜರುಗಿಸಬೇಕು.

**12.** ಕೆರೆ ಪ್ರಾಧಿಕಾರ, ಜಲಾನಯನ ಇಲಾಖೆ, ಜಿಲ್ಲಾ ಪಂಚಾಯತ, ಜಲಸಂವರ್ಧನಾ ಸಂಸ್ಥೆ ಮುಂತಾದ ಸರ್ಕಾರದ ಇಲಾಖೆಗಳಲ್ಲಿ ಕೆರೆ ಅಭಿವೃದ್ಧಿ ಬಗ್ಗೆ ಸಮನ್ವಯ ತರಬೇಕು. ಇದಕ್ಕೆ ಏಕ ಗವಾಕ್ಷಿ ಯೋಜನೆ ಅತ್ಯವಶ್ಯ.

**13.** ಪಟ್ಟಣಗಳ ತ್ಯಾಜ್ಯಗಳನ್ನು ಕೆರೆಗಳಿಗೆ ತುಂಬಿ ಕೆರೆ ನಾಶ ಮಾಡುವ ಕುಪ್ರವೃತ್ತಿ, ಕಾಯಿದೆಬಾಹಿರ ಚಟುವಟಿಕೆಗಳು ಎಲ್ಲೆಡೆ ವ್ಯಾಪಕವಾಗಿವೆ. ಇವುಗಳ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು.

**14.** ಪಶ್ಚಿಮಘಟ್ಟದ ಹೊಳೆ, ಹಳ್ಳಗಳು ದಕ್ಷಿಣ ಭಾರತಕ್ಕೇ ನೀರಿನ ಮೂಲಗಳಾಗಿವೆ. ಈಗಾಗಲೇ ಜಾರಿ ಆಗಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಬೃಹತ್ ಜಲವಿದ್ಯುತ್ ಯೋಜನೆಗಳು ಪಶ್ಚಿಮಘಟ್ಟದ ನದಿಗಳ ನೀರಿನ ಲಭ್ಯತೆಯನ್ನು ಅವಲಂಬಿಸಿವೆ. ಈ ನೀರಾವರಿ ಯೋಜನೆಗಳ ದಕ್ಷತೆ ನಿರ್ವಹಣೆ ವ್ಯವಸ್ಥಿತಗೊಳಿಸಬೇಕು. ಪಶ್ಚಿಮಘಟ್ಟದ ನದಿಗಳನ್ನು ತಿರುಗಿಸುವ ಹಾಗೂ ಜಲವಿದ್ಯುತ್ ಯೋಜನೆಗಳನ್ನು ಪಶ್ಚಿಮಘಟ್ಟದಲ್ಲಿ ನಿರ್ಮಾಣ ಮಾಡುವ ಹೊಸ ಯೋಜನೆಗಳ ಜಾರಿ ಬಗ್ಗೆ ಪುನರ್‌ವಿಮರ್ಶೆ ಆಗಬೇಕು.

**15.** ಪಶ್ಚಿಮಘಟ್ಟದ ಜಲಮೂಲಗಳು, ಕೆರೆಗಳು, ಹಳ್ಳಗಳು ಅತಿಯಾದ ಕ್ರಿಮಿನಾಶಕ ಬಳಕೆಯಿಂದ ತೀವ್ರವಾಗಿ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಎಂಡೋಸಲ್ಫಾನ್ ಸಿಂಪಡಣೆಯಿಂದ ಆಗಿರುವ ಭಾರಿ ಅನಾಹುತಗಳು ಈಗಾಗಲೇ ಇವೆ. ಆದ್ದರಿಂದ ಸರ್ಕಾರ ಮಲೆನಾಡಿನಲ್ಲಿ ಅತಿಯಾದ ಕ್ರಿಮಿನಾಶಕ ಬಳಕೆಗೆ ಕಡಿವಾಣ ಹಾಕಬೇಕು.

ಕರಾವಳಿಮುಂಜಾವು, 17-11-2014, Page No: 2.